ಮೂಲ ದಾವಾ ಸಂಖ್ಯೆ. 127/2018                ಪಿ ಡಬ್ಲ್ಯೂ   3

(ದಿನಾಂಕ 09-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ  ಎ ಕೆ   ವಕೀಲರಿಂದಃ-

ಈ ದಾವೆಯನ್ನು  ರಾಮಣ್ಣ ನಾಗಪ್ಪನ ವಿರುದ್ಧ ನಮ್ಮ ತಂದೆಯ ಆಸ್ತಿಯಲ್ಲಿ ಹಿಸ್ಸೆ ಬೇಕು ಅಂತಾ ದಾಖಲಿಸಿದ್ದಾರೆ. ಹಾವಪ್ಪ ಮತ್ತು ಮರಿಗೋಣೆಪ್ಪ ಇಬ್ಬರು ಸಹೋದರರು. ಈ ದಾವೆಯನ್ನು ಒಟ್ಟು ಎಷ್ಟು ಸರ್ವೆ ನಂಬರ್ ಮೇಲೆ ದಾಖಲಿಸಿದ್ದಾರೆ ಅವುಗಳು ವಿಸ್ತೀರ್ಣ ಏನು ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ. ಸನ್ 1963 ರಲ್ಲಿ ಸದರಿ ಮರಿಗೋಣೆಪ್ಪ ಇವರು ಸದರಿ ಆಸ್ತಿಯನ್ನು ಪ್ರತಿವಾದಿಯರ ತಂದೆ ಹಾವಪ್ಪ ಇವರಿಗೆ ರೂ.1500/- ಗಳಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾಸ್ತಿಗಳಿಗೆ ಸಂಬಂಧಿಸಿದ ಜಮೀನುಗಳ ಪಹಣಿಗಳನ್ನು ನಾನು ನೋಡಿಲ್ಲ. 2 ಮತ್ತು 5 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾಸ್ತಿಯ ಪಹಣಿಗಳು ಜಂಟಿಯಾಗಿ ದಾಖಲಿವೆ ಎಂದರೆ ಸರಿ. ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಸನ್ 1960 ರಲ್ಲಿ ಹಾವಪ್ಪ ಮತ್ತು ಮರಿಗೋಣೆಪ್ಪ ಇವರ ನಡುವೆ ಪಾಲುವಿಭಾಗವಾಗಿ ದಾವಾ 1 ನೇ ಆಸ್ತಿಯನ್ನು ಪ್ರತಿವಾದಿಯರ ತಂದೆಗೆ ಮರಿಗೋಣೆಪ್ಪ ಇವರು ಮಾರಾಟ ಮಾಡಿದ್ದು ಆ ಕಾರಣದಿಂದಾಗಿ ವಾದಿಯರಿಗೆ ದಾವಾಸ್ತಿಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲವೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಈ ದಾವೆಯ ಬಗ್ಗೆ ಮತ್ತು ಈ ದಾವಾಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ